# ಸ್ತ್ರೀವಾದದ ತಾತ್ತ್ವಿಕತೆಯ ಚಾರಿತ್ರಿಕ ವಿಶ್ಲೇಷಣೆ

ಬಂಡವಾಳವಾದೀ ಹಿತಾಸಕ್ತಿಯು ಕಲೆಯ ಮತ್ತು ಜ್ಞಾನದ ವಲಯಗಳನ್ನು ತನ್ನ ಅಧೀನವಾಗಿಸಿಕೊಳ್ಳಲು ಯತ್ನಿಸುತ್ತ, ತಾತ್ತ್ವಿಕ ಸ್ಪಷ್ಟತೆಗಳಿಲ್ಲದ ಗೋಜಲುಗಳನ್ನು ನಿರ್ಮಿಸುತ್ತಿದೆ. ಪರಿಣಾಮವಾಗಿ ಸಾಹಿತ್ಯಿಕ–ಸಾಂಸ್ಕೃತಿಕ ವಲಯದಲ್ಲಿ ಸ್ತ್ರೀವಾದದ ಕುರಿತ ಸೈದ್ಧಾಂತಿಕ ಅಸ್ಪಷ್ಟತೆ ಹೆಚ್ಚಿದೆ. ಅದೊಂದು ಮಹಿಳಾಪರ ವಕಾಲತ್ತು ಎಂಬ ಸರಳೀಕರಣವಿದೆ. ಹೆಣ್ಣುಬಾಳು ಬದಲಾದ ಸಾಮಾಜಿಕತೆಯಲ್ಲಿ ಹೊಸ ಹೊಸ ದಮನಗಳಿಗೆ ಒಳಗಾಗುತ್ತಿದೆ. ಈ ಅಸಮಾನತೆಯ, ಅಸಹನೆಯ ಕಾರಣವನ್ನು ಸ್ಪಷ್ಟೀಕರಿಸುವ ವಿಚಾರಧಾರೆಯ ಅಗತ್ಯವಿದೆ. ಅದನ್ನು ತುಂಬಬಲ್ಲ ಕೃತಿ ಸ್ತ್ರೀವಾದ–ಚಿಂತನೆ ಮತ್ತು ಹೋರಾಟ. ಎಚ್. ಎಸ್. ಶ್ರೀಮತಿ ಕನ್ನಡದ ಪ್ರಮುಖ ಸ್ತ್ರೀವಾದಿ ಚಿಂತಕಿ. ಸಿಮೊನ್ ದಿ ಬುವಾ, ಬೆಟ್ಟಿ ಫ್ರೀಡನ್ ವಿಚಾರಧಾರೆಗಳನ್ನು ಕನ್ನಡಕ್ಕೆ ತಂದವರು. ಕನ್ನಡದಲ್ಲಿ ಸ್ತ್ರೀವಾದದ ಪಾರಿಭಾಷಿಕ ಪದ ಕೋಶವನ್ನು ಕೊಟ್ಟವರು.




ಸ್ತ್ರೀವಾದ
ಚಿಂತನೆ ಮತ್ತು ಹೋರಾಟ
ಲೇ: ಎಚ್.ಎಸ್. ಶ್ರೀಮತಿ
ಪ್ರ: ಅಭಿರುಚಿ ಪ್ರಕಾಶನ, ಮೈಸೂರು

ಪ್ರಸ್ತುತ ಕೃತಿಯು ಸ್ತ್ರೀವಾದದ ತಾತ್ತ್ವಿಕತೆಯನ್ನು, ಪರಿಕಲ್ಪನೆಯನ್ನು ಚಾರಿತ್ರಿಕವಾಗಿ ವಿಶ್ಲೇಷಿಸುತ್ತದೆ. ಚಾರಿತ್ರಿಕ ಪಲ್ಲಟಗಳಲ್ಲಿ ಫಲಾನುಭವಿ ವರ್ಗ ಮಹಿಳೆಯೋ, ಒಟ್ಟು ಸಮುದಾಯವೋ ಎಂಬುದನ್ನು ಕಾಣಿಸುತ್ತದೆ. ವಿಭಿನ್ನ ಕಾಲ–ದೇಶ–ಸಂದರ್ಭಗಳಲ್ಲಿ ತಾತ್ತ್ವಿಕತೆಯನ್ನು ರೂಪಿಸಿಕೊಂಡು ನಡೆದು ಬಂದ ಸ್ತ್ರೀವಾದವನ್ನು ಪಾಶ್ಚಾತ್ಯ ಚಿಂತನೆ ಎನ್ನುವುದು ಹುಸಿ. ಸ್ತ್ರೀವಾದಗಳು ಎಂಬ ಬಹುತ್ವದಲ್ಲಿಯೇ ಅರ್ಥೈಸಿಕೊಳ್ಳಬೇಕಿರುವುದನ್ನು ಕಾಣಿಸುತ್ತದೆ. ಸ್ತ್ರೀವಾದವು ತಾಯ್ತನದ ಒಳಗೊಳ್ಳುವಿಕೆಯದು. ಈ ತಾಯ್ತನವು ಪಿತೃ ವ್ಯವಸ್ಥೆಯ ನಿರ್ವಚನವನ್ನು ಮೀರಿದ್ದು. ಲಿಂಗತಾರತಮ್ಯವು ಪುರುಷರನ್ನೂ ನಲುಗಿಸಿದೆಯೆಂಬ ಹೆಣ್ಣೋಟದ ಲೋಕಮೀಮಾಂಸೆಯನ್ನು ಈ ಕೃತಿ ನಿರೂಪಿಸುತ್ತದೆ. ಸ್ತ್ರೀವಾದಿ ಪರಿಕಲ್ಪನೆ, ಚಳವಳಿ, ಚರಿತ್ರೆಗಳ ವಿಸ್ತಾರ ನಡೆಯ ಚರ್ಚೆಯಲ್ಲಿಯೂ, ಸೂಕ್ಷ್ಮತೆಯನ್ನು ಕೈಬಿಡದ ನಿರೂಪಣೆಯಿದು. ಅಂತರರಾಷ್ಟ್ರೀಯ ಮಹಿಳಾ ಸಮಾವೇಶಗಳಲ್ಲಿ ಮಂಡಿತವಾದ ಹಕ್ಕೊತ್ತಾಯಗಳು, ಪಾರಂಪರಿಕ ಪಿತೃತ್ವದ ಕ್ರೌರ್ಯವನ್ನು ಪ್ರಶ್ನಿಸಿದೆ. ಅತ್ಯಾಚಾರವನ್ನು ಪುರುಷತ್ವದ ಅಹಂಕಾರದ ನಡೆ ಎಂಬುದರಿಂದ ಬದಲಿಸಿ, ಅದೊಂದು ಅಪರಾಧವೆಂದು ಪರಿಗಣಿಸುವವರೆಗಿನ ಇತಿಹಾಸದಲ್ಲಿ ಮಹಿಳಾವಾದ ಮತ್ತು ಮಹಿಳಾ ಹೋರಾಟದ ಜೊತೆಹೆಜ್ಜೆಗಳು ಇಲ್ಲಿ ದಾಖಲಾಗಿವೆ. ಸ್ತ್ರೀವಾದಗಳು ಎಂದಮೇಲೂ ದಲಿತ ಸ್ತ್ರೀವಾದವನ್ನು ಪ್ರತ್ಯೇಕವಾಗಿ ಅಷ್ಟೇ ಅಲ್ಲ ದಲಿತ ಸ್ತ್ರೀವಾದಗಳು ಎಂದು ನೋಡಬೇಕಾದ ಅಗತ್ಯವನ್ನು ಕಾಣಿಸುತ್ತದೆ. ಈ ಎಲ್ಲವೂ ಸ್ತ್ರೀವಾದದ ಕವಲುಗಳೇ ಹೊರತೂ ಸೀಳುಗಳಲ್ಲ ಎಂಬುದನ್ನು ನಿರೂಪಿಸುತ್ತದೆ. ಇಂತಹ ಹಲವು ಕಾರಣಗಳು ಈ ಕೃತಿಯ ಮಹತ್ವ ಹೆಚ್ಚಿಸಿದೆ.

**● ವಿನಯಾ ಒಕ್ಕುಂದ**